# ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಅಧಿನಿಮಯದ ಅಪರಾಧಗಳ ವಿಶೇಷ ನ್ಯಾಯಾಲಯ ಮತ್ತು 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು ಜಿಲ್ಲೆ, ರಾಯಚೂರು.

ಸ್ಪೇಷಲ್ .ಸಿ **ಸಂಖ್ಯೆ: 367/2020**

ಪ್ರಾ.ಸಾ-12

ಚಾ.ಸಾ-14

ಸಾಕ್ಷಿದಾರರು ಕ್ರಮವಾಗಿ ವಿಡಿಯೋ ಕಾನ್ಫರೆನ್ಸ್ ಮೂಲಕ ಪ್ರಮಾಣ ವಚನ ಮಾಡಿದರು ದಿನಾಂಕ 30-12-2021.

| | |
|---|---|
| ಸಾಕ್ಷಿದಾರರ ಹೆಸರು | ಡಾ.ಸುನೀಲ ಮನೋಹರ್ |
| ತಂದೆಯ ಹೆಸರು | ಶಂಕ್ರಪ್ಪ |
| ವಯಸ್ಸು | 36 |
| ಉದ್ಯೋಗ | ವೈದ್ಯಾಧಿಕಾರಿಗಳು, ಸಾರ್ವಜನಿಕ ಆಸ್ಪತ್ರೆ ಹೊಸದುರ್ಗ |
| ವಾಸಸ್ಥಳ | ಹೊಸದುರ್ಗ |

**<u>ಮುಖ್ಯ ವಿಚಾರಣೆ : ಸಾರ್ವಜನಿಕ ಅಭಿಯೋಜಕ</u>ರಾದ ಮಂಜುನಾಥ ರವರಿಂದ .**

ನಾನು **2017** ರಿಂದ ಸಪ್ಟೆಂಬರ್**-2020** ವರೆಗೆ ದೇವದುರ್ಗ ಸಾರ್ವಜನಿಕ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ **25-06-2020** ರಂದು ಸಂಜೆ **6-00** ಗಂಟೆಗೆ ಲಕ್ಷ್ಮೀ ಗಂಡ ಯಲ್ಲಪ್ಪ, **38** ವರ್ಷ ಇವರು ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗೆಂದು ಬಂದರು. ಅವರನ್ನು ಪರೀಕ್ಷಿಸಿದಾಗ ಅವರ ದೇಹದ ಮೇಲೆ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ;

**1)** ದೇಹದ ತುಂಬೆಲ್ಲಾ ಅಸಂಖ್ಯಾತ ತರಚಿದ ಗಾಯಗಳು ಇದ್ದವು.

**2)** ಬೆನ್ನಿನ ಮೇಲೆ ಮಧ್ಯಭಾಗದಲ್ಲಿ ಊತದ ಗಾಯವಿದ್ದು ಮುಟ್ಟಿದರೆ ನೋವು ಎಂದು ಹೇಳುತ್ತಿದ್ದರು.

ನನ್ನ ಅಭಿಪ್ರಾಯದಂತೆ ಮೇಲಿನ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು ಆ ಬಗ್ಗೆ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನಿ.ಪಿ**-7** ಎಂದು, ವೈದ್ಯರ

ಸಹಿಯನ್ನು ನಿ.ಪಿ-7(ಎ) ಎಂದು ಗುರುತಿಸಲಾಯಿತು. ನೆಲೆದ ಮೇಲೆ ಎಳೆದಾಡಿದರೆ, ಕೈಯಿಂದ ಹಾಗೂ ಕಾಲಿನಿಂದ ಹಲ್ಲೆ ಮಾಡಿದರೆ ನಿ.ಪಿ-7 ರಲ್ಲಿ ನಮೂದಿಸಿದ ಗಾಯಗಳು ಆಗುವ ಸಾಧ್ಯತೆ ಇದೆ.

**ಪಾಟೀ ಸವಾಲು : ಆರೋಪಿತರ ಪರವಾಗಿ ಶ್ರೀ ಎಮ್.ಜೆಡ್.ಪಿ ವಕೀಲರಿಂದ :-**

ದೇವದುರ್ಗ ಸಾರ್ವಜನಿಕ ಆಸ್ಪತ್ರೆಯು ದೇವದುರ್ಗ ಪೋಲಿಸ್ ಠಾಣೆಯ ಎದುರುಗಡೆ ಇದೆ ಎಂದರೆ ಸರಿ. ಗಾಯಾಳುವಿನ ಜೊತೆಗೆ ಎಷ್ಟು ಜನ ಆ ದಿನ ಆಸ್ಪತ್ರೆಗೆ ಬಂದಿದ್ದರು ನನಗೆ ಈಗ ಹೇಳಲು ನೆನಪಿಲ್ಲ. ಗಾಯಾಳು ಆಸ್ಪತ್ರೆಗೆ ಬಂದಾಗ ಸುಸ್ಥಿತಿಯಲ್ಲಿದ್ದು ಹೇಳಿಕೆ ನೀಡಲು ಸಶಕ್ತಳಾಗಿದ್ದಳು. ಒಬ್ಬ ವ್ಯಕ್ತಿ ಹಲ್ಲೆ ಇತಿಹಾಸದಲ್ಲಿ ಚಿಕಿತ್ಸೆಗೆ ದಾಖಲಾದರೆ ಎಮ್.ಎಲ್.ಸಿ ವರದಿ ಮಾಡಬೇಕು ಎಂದರೆ ಸರಿ. ಈ ಕೇಸಿನಲ್ಲಿ ನಂತರ ವರದಿ ಮಾಡಲಾಗಿದೆ. ನಾನು ಎಮ್.ಎಲ್.ಸಿ ವರದಿಯನ್ನು ಪೋಲಿಸರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಗಾಯದ ಪ್ರಮಾಣ ಪತ್ರದಲ್ಲಿ ಗಾಯದ ಅವಧಿಯನ್ನು ನಮೂದಿಸಿಲ್ಲ ಎಂದರೆ ಸರಿ. ಸದರಿ ಗಾಯಾಗಳು ತಾಜಾ ಸ್ವರೂಪದ ಗಾಯಗಳಾಗಿದ್ದವು. ಒಬ್ಬ ವ್ಯಕ್ತಿ ಗಟ್ಟಿಯಾದ, ವರಟಾದ ಸ್ಥಳದಲ್ಲಿ ಬಿದ್ದರೆ ನಿ.ಪಿ-7 ರಲ್ಲಿ ನಮೂದಿಸಿದ ಗಾಯಗಳು ಆಗುವ ಸಾಧ್ಯತೆ ಇದೆ ಎಂದರೆ ಸರಿ. ನಾನು ಯಾವುದೇ ಗಾಯಾಳುವಿಗೆ ಚಿಕಿತ್ಸೆ ನೀಡಿಲ್ಲ ಪೋಲಿಸರ ಮಾತು ಕೇಳೀ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ.

(ಉಕ್ತ ಉಲ್ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು)
ಓ. ಹೇ. ಕೇ. ಸರಿ ಇದೆ.

1ನೇ ಹೆಚುವ್ಚರಿ ಸತ್ರ ನ್ಯಾಯಾಧೀಶರು,
ರಾಯಚೂರು.